doc-155
T.P-2

SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 153] ಮಂಗಳವಾರ 19—2—46 [ಬಿಡಿ ಪ್ರತಿ 3 ಪೈ

ಯುದ್ಧಾನಂತರದ ಸ್ಥಿತಿ?

ಯುದ್ಧಾನಂತರ ಭಾರತ ದೇಶದಲ್ಲಿ ಎಲ್ಲಿ ನೋಡಿದರೂ ಯಾವ ಸಾಲೆಯಲ್ಲಿ ನೋಡಿದರೂ ಆಹಾರಾಭಾವದಿಂದ ಅಲೆದಾಡುತ್ತಿರುವವರ ಹಾಗೆ ಕಂಡುಬರುತ್ತಿದೆ. ಈಚಿಗೆ ಫ್ರಾನ್ಸಿನಲ್ಲಿ ಸೋಲ್ಜರ್‌ಗಳು 'ನಮಗೆ ಮೊದಲು ಅನ್ನಬೇಕು; ತುಪಾಕಿಗಳು ಬೇಡ' ಎಂದು ಹೇಳಲಾರಂಭಿಸಿದರು

ಈಚಿಗೆ ರಷ್ಯಾ ಪ್ರತಿನಿಧಿ ವಿಷ್ಕಸ್ಕಿಗೂ ಬ್ರಿಟಿಷ್ ವಿದೇಶಾಂಗ ಮಂತ್ರಿ ಬೆವಿನ್‌ಗೂ ವಾದವಿವಾದಗಳು ನಡೆದವೆಂದೂ ವಿಶ್ವರಾಷ್ಟ್ರ ಸಮಿತಿಗೆ ಮುಖ್ಯ ವಿಷಯ ಪರಿಸ್ಥಿತಿ ಪ್ರಾಪ್ತವಾಗಿದೆಯೆಂದೂ ವರ್ತಮಾನ.

ಪ್ರಪಂಚದಲ್ಲಿ ಶಾಂತಿಯು ನೆಲೆಗೊಳಿಸಬೇಕಾದಲ್ಲಿ ಮೊದಲು ಆಗ್ರ ರಾಜ್ಯಗಳು ಅಸ್ತ್ರ ಸನ್ಯಾಸವನ್ನು ಸ್ವೀಕರಿಸಬೇಕೆಂದೂ ಹಾಗೇನೂ ಮಾಡದಿದ್ದಲ್ಲಿ ಪ್ರಪಂಚದಲ್ಲಿ ಶಾಂತಿಯು ಅಸಂಭವವೆಂದೂ ಅಮೇರಿಕಾ ಸ್ಟೇಟ್ ಅಧಿಪತ್ರಾಯಪಟ್ಟಿದೆ. ಈಗಿನ ವಿಶ್ವ ರಾಜ್ಯ ಸಮಿತಿಯು ಮತ್ತೊಂದು ಪ್ರಪಂಚ ಯುದ್ಧವು ಆಗದಂತೆ ಮಾಡಲು ಅಸಮರ್ಥವಾಗಿದೆಯೆಂದೂ ತಿಳಿಸಿದೆ. ಅನೇಕರಿಕಾಕ್ಕೆ ಇಷ್ಟು ಸೇನೆ ಏಕೆ ಎಂದು ಕೇಳಿದಲ್ಲಿ 'ಏನೋ ? ಯಾವ ಸಮಯ ಹೇಗಿರುತ್ತದೋ ? ' ಎಂಬ ಶಂಕೆ.

ಪಶ್ಚಾತ್ಯ ಇಂಡೋನೇಷಿಯಾ ಪರಿಸ್ಥಿತಿಗಳು ಇನ್ನೂ ಸುಗಮವಾಗಿಲ್ಲ. ಮುಂದೆ ನೋಡಬೇಕಾಗಿದೆ ಪ್ರಪಂಚ ಶಾಂತಿ ಹೇಗಿರುತ್ತದೆ ಎಂಬುದನ್ನು.

(ದಿ. ವಾ.)

ಎಲ್ಲೆಲ್ಲೂ ಇದೇ ಪುರಾಣ

ಆಸ್ಟ್ರಿಯಾದ ಕೆಲವು ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿಯುಂಟಾಗಿದೆಯೆಂದೂ ಬಲ್ಗೇರಿಯಾದ ಪರಿಸ್ಥಿತಿಯು ಅತಿ ಭೀಕರವಾಗಿದೆಯೆಂದು ಪ್ರಕಟವಾಗಿದೆ.

ಹಿಂದೂ ಮಹಮ್ಮದೀಯರ ಗಲಭೆ

ಜಮ್ಮು ವಿನಲ್ಲಿ ತಾ || 16 ರಲ್ಲಿ ಹಿಂದೂ ಮಹಮ್ಮದೀಯ ಗಲಭೆಯಾಗಿ 28 ಮಂದಿಗೆ ಜಖಂ ಆಗಿದೆ.

ಚಿತ್ರದುರ್ಗ ಜಿಲ್ಲೆಗೆ ಸಹಾಯ

ಕ್ಷಾಮಪೀಡಿತ ಜನಗಳಿಗೆ ಹೆಚ್ಚಿನ ವೈದ್ಯಕೀಯ ಸಹಾಯವನ್ನು ಒದಗಿಸಲು ಚಿತ್ರದುರ್ಗ ಜಿಲ್ಲೆಗೆ ಐದು ಅಂಬುಲೆನ್ಸ್ ಕಾರುಗಳೂ, ಸ್ಪೆಷಲ್ ಅಸಿಸ್ಟೆಂಟ್ ಸರ್ಜನರೂ, ಹೆಚ್ಚಿನ ಸಂಖ್ಯೆ ನರ್ಸ್‌ಗಳೂ ಔಷಧಿಗಳೂ ತೀಕ್ಷ್ರದಲ್ಲಿಯೇ ಬಂದು ಅದರ ವ್ಯವಸ್ಥೆಯನ್ನು ಬೇಗನೆ ಕೈಗೊಳ್ಳಲಾಗುವುದೆಂದು ಹೇಳಲಾಗಿದೆ.

— ನೀರಿಲ್ಲದ ಪ್ರಯುಕ್ತ ಪೆನುಗೊಂಡಾದಲ್ಲಿ 1 ಲೋಟಾ ನೀರಿಗೆ ಆಣಕಾಸು.

ಜೆಪ್ರಕಾಶನಾರಾಯಣ ಬಿಡುಗಡೆ!

ವಿವಿಧ ವೃತ್ತಾಂತ

ವಿಸೂವಿಯಸ್ ಜ್ವಾಲಾಮುಖಿಯು ಮತ್ತೆ ಉಲ್ಬಣವಾಗುವುದೆಂದು ಹೇಳಲಾಗಿದೆ.

ಜಪಾನ್ ಯುದ್ಧ ನಿಮಿತ್ತ ಗಮನಿಸಲು ಅಸಾಧ್ಯವಾದ ಪ್ರಯುಕ್ತ ಚೀನಾದಲ್ಲಿ ಪ್ರವಾಹ ಹರಿದು ಆಹಾರ ಬೆಳೆಗಳು ಹಾಳಾಗಿರುವುದಲ್ಲದೇ, 60 ಲಕ್ಷ ಮಂದಿ ನಿರ್ಗತಿಕರಾಗಿರುವರು.

ಮೈಸೂರು ಸಂಸ್ಥಾನಕ್ಕೆ ಮಧ್ಯ ಪ್ರಾಂತ್ಯದಿಂದ 2 ಸಾವಿರ ಟನ್ನು ಮತ್ತು ಸಿಂಧ್ ಪ್ರಾಂತ್ಯದಿಂದ 2 ಸಾವಿರ ಟನ್ ಉದ್ದನ್ನು ಭಾರತ ಸರಕಾರದವರು ಹಂಚಿದ್ದಾರೆ

ದೇವಿ

ಇದುವರೆಗೆ 40000 ಮಂದಿಗೆ ದೇವಿ ಹಾಕಿರುವುದಾಗಿ ಮೈಸೂರು ಪೌರಸಭೆಯ ಆರೋಗ್ಯ ಶಾಖೆಯ ವರದಿ ತಿಳಿಸುತ್ತದೆ

ಆಹಾರ ಡೈರೆಕ್ಟರು ಭರವಸೆಯಿತ್ತ ಪ್ರಯುಕ್ತ ಇದೇ ತಾ || 22 ರಿಂದ 28 ರ ವರೆಗೆ ಹೋಟೆಲ್ ಇತ್ಯಾದಿಗಳನ್ನು ಬಂದು ಮಾಡಬೇಕೆಂದು ಮಾಡಿದ್ದ ನಿರ್ಣಯವನ್ನು ಹೋಟಲ್ ಸಂಘ ರದ್ದು ಮಾಡಿರುವುದಾಗಿ ಬೆಂಗಳೂರು ವರದಿ ತಿಳಿಸುತ್ತದೆ.

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಮಹಾಧಿವೇಶನವು ನ್ಯೂಯಾರ್ಕಿನಲ್ಲಿ ಮುಂದಿನ ಮಾಹೆ ತಾ || 21 ರಲ್ಲಿ ಸೇರುವುದು.

ಪೊನ್ನೆಯ ದಿವಸ ಮಂಗಳೂರು ಪತ್ರಿಕೋದ್ಯಮಿಗಳು ಆಚಾರ್ಯ ಕೃಪಾಲಿನಿಯವರಿಗೆ ಸತ್ಕಾರವೇರ್ಪಡಿಸಿದ್ದರು.

ಹೊಸ ಸುದ್ದಿ

ನವದೆಹಲಿ, ಫೆ 18 — ರೈಲ್ವೆದರ ಇಳಿಯುವಂತಿಲ್ಲವೆಂದೂ ರೈಲ್ವೆ ಉತ್ಪತ್ತಿಯಲ್ಲಿ ಅಂದಾಜಿಗಿಂತ ಕಡಿಮೆ ಬಂದಿರುವುದೆಂದೂ ರೈಲ್ವೆ ಮಂತ್ರಿ ಕೇಂದ್ರ ಸಭೆಯಲ್ಲಿ ತಿಳಿಸಿದರು.

ಲಂಡನ್, ಫೆ 17 — ಸ್ಪೇನಿನ ರಾಜ ಪಂಗಡದವರು ಜ || ಫ್ರಾಂಕೋನನ್ನು ವನವಾಲೆಗೆ ಕೂರಿಸುವ ಪ್ರಯತ್ನವನ್ನು ನೂಡತ್ತಿದ್ದಾರೆ.

ನ್ಯೂಯಾರ್ಕ್, ಫೆ 17 — ರಷ್ಯಾದ ಗೂಢಚಾರರು ಕೆನಡಾ ಅಟಂ ಬಾಂಬು ರಹಸ್ಯವನ್ನು ಅದರ ಪ್ಲಾನು ಉಪಯೋಗಿಸುವ ಲೋಹವುಂತಾದುವನ್ನು ಹಾರಿಸಿಕೊಂಡು ಹೋಗಿರುವುದಾಗಿದೆ. ಇಂಗ್ಲೆಂಡಿನಲ್ಲಿ ಅಟಂ ಬಾಂಬು ತಯಾರಿಕೆಯ ಸ್ಥಳದಲ್ಲಿ ಭದ್ರ ಕಾವಲಿದೆ.

ಮಾರ್ಚಿ ಮೊದಲನೇ ವಾರದಲ್ಲಿ ಜಯಪ್ರಕಾಶನಾರಾಯಣ್ ಮತ್ತು ಲೋಹಿಯಾರ ಬಿಡುಗಡೆಯಾಗುವುದಾಗಿ ತಿಳಿಯ ಒಂದಿದೆ.

ದಿವಾನರು ಮತ್ತಿತರೂ ಸಾಕ್ಷಿಗೆ ಬರುವುದು ಅನಾವಶ್ಯಕವೆಂದು ಶ್ರೀ ತಿಮ್ಮಾರೆಡ್ಡಿಯವರ ಮೊಕದ್ದಮೆಯ ವೇಳೆ ಚಿಕ್ಕಬಳ್ಳಾಪುರ ಮ್ಯಾಜಿಸ್ಟ್ರೇಟರು ಹೊರಡಿಸಿರುವ ಅಜ್ಞೆಯ ಬಗ್ಗೆ ರಿವಿಜ್ ಅರ್ಜಿಯನ್ನು ಹೈಕೋರ್ಟಿಗೆ ಹಾಕಲಾಗಿದೆ.

ಸಂಸ್ಥಾನದಲ್ಲೆಲ್ಲಾ ತಾ || 27 ರಲ್ಲಿ ಕೋಲಾರ ಚಿನ್ನದ ಗಣಿಯ ವಿಮ್ಕರಿಕಾರರ ದಿನಪಾಚರಿಸಬೇಕೆಂದು ನಿನ್ನೆ ಬೆಂಗಳೂರಿನಲ್ಲಿ ಶ್ರೀ ಭಾಷ್ಯಂ ಅಧ್ಯಕ್ಷತೆಯಲ್ಲಿ ಸೇರಿದ್ದ ವಿವಿಧ ಕೂಲಿಗಾರ ಪಕ್ಷ ನಾಯಕರ ಸಭೆಯಲ್ಲಿ ತೀರ್ಮಾನವಾಯಿತು.

ಆಸ್ಟ್ರೇಲಿಯಾದಿಂದ ಹೊರಕ್ಕೆ ಹೆಚ್ಚು ಧಾನ್ಯ ಕಳುಹಿಸಲು ಅನುಕೂಲವಾಗುವುದಕ್ಕಾಗಿ ಅಲ್ಲಿ ರೇಷನ್ ಜಾರಿಗೆ ತರುವ ಯೋಚನೆಯಿದೆಯಂತೆ.

ಪೋಲೀಸರ ದೇಶಭಕ್ತಿ

ಕಳೆದ ಪಂಚಮಿ ದಿನ ಗಯಾದಲ್ಲಿಯ ಪೋಲೀಸರು ಗಾಂಧಿ, ಜವಾಹರಲಾಲ ನೆಹರು, ಸುಭಾಷ್ ಚಂದ್ರ ಬೋಸ್, ಇವರ ಭಾವಚಿತ್ರಗಳ ಮೆರವಣಿಗೆ ತೆಗೆದಿದ್ದರೆಂದು ತಿಳಿಯಬಂದಿದೆ.

ಧರ್ಮಾಂತರ ನಿಶ್ಚಯ

ಜಬ್ಬಲ್ಪುರದ ಹತ್ತಿರದ ಮಂಡಲಾ ಎಂಬಲ್ಲಿಯ ಒರ್ವ ಮುಸ್ಲಿಂ ಮನುಷ್ಯನು ತನ್ನ ಎಲ್ಲ ಕುಟುಂಬದ ಜನರೊಂದಿಗೆ ಹಿಂದೂ ಧರ್ಮಕ್ಕೆ ಸೇರುವುದಕ್ಕಾಗಿ ಅನ್ನಸತ್ಯಾಗ್ರಹ ಕೈಗೊಂಡಿರುವನು. ಈಗಾಗಲೇ ತನ್ನ ಸತ್ಯಾಗ್ರಹದ 2 ನೇ ವಾರ ಪ್ರಾರಂಭವಾಗಿರುವುದು.

ಡಿಸ್ಟ್ರಿಕ್ಟ್ ಬೋರ್ಡ್.

ಮೈಸೂರು ಫೆ 19— ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಸಾಧಾರಣ ಮೀಟಿಂಗು ಈ ತಿಂಗಳು ತಾ || 27 ನೇ ಬುಧವಾರ ಮಧ್ಯಾಹ್ನ 12 ಘಂಟೆಗೆ ಬೋರ್ಡ್ ಆಫೀಸು ಕಟ್ಟಡದಲ್ಲಿ ನಡೆಯುವುದು.

ಕಲಾ ಪ್ರದರ್ಶನ ಮಂದಿರ

ಮುಂಬಯಿ ಗೌರ್ನರರಾದ ಸರ್ ಜಾರ್ಜ್ ಕಾಲ್ವಿಲ್ಲರು ಕಲಾ ಸಂಸ್ಥೆಯ ಪ್ರದರ್ಶನದ ಉದ್ಘಾಟನೋತ್ಸವ ಮಾಡುವಾಗ್ಗೆ ಮುಂಬಯಿ ಪಟ್ಟಣದಲ್ಲಿ ಒಂದು ಕಲಾ ಪ್ರದರ್ಶನ ಮಂದಿರವನ್ನು ಕಟ್ಟಿಸುವುದಕ್ಕಾಗಿ ಸರ್ ಕಾವಸಜಿ ಜಹಂಗೀರರವರಿಂದ ನಾಲ್ಕು ಲಕ್ಷ ರೂ. ಕಾಣಿಕೆಯು ದೊರೆತಿರುವುದಾಗಿ ಸಾರಿದರು.

ಬ್ಲಾಂಕೆಟ್ ಟಾರ್ಜನ್

ಈಕೆಯು ಒಬ್ಬ ಫ್ರೆಂಚ್ ಬಾಲಕಿ. ವಯಸ್ಸು 13 ಪಿಟೀಲು ನುಡಿಸುವುದರಲ್ಲಿ ಪ್ರವೀಣಳು. ಆಕೆಗೆ ಪ್ಯಾರೀಸ್‌ನಲ್ಲಿ ಭಾರೀ ಬಹುಮಾನವು ದೊರೆತಿದೆ. ಯಹೂದಿ ಮೆನುರ್ಹಿ ಎಂಬ ಮಗುವು ಆ ವಾದ್ಯಗಳನ್ನು ಕೇಳಿ ಪರವಶಳಾಗಿ ಆನಂದ ಬಾಷ್ಪಗಳನ್ನು ಸುರಿಸಿದಳು.

ತಿರಸ್ಕಾರ

ಅಮೇರಿಕಾ ಪ್ರೆಸಿಡೆಂಟರ ವಾಸ ಸ್ಥಾನವಾದ ಶ್ವೇತಭವನಕ್ಕೆ 870.00 ಡಾಲರು ವೆಚ್ಚದಿಂದ ಹೆಚ್ಚು ಕಟ್ಟಡ ಕಟ್ಟಬೇಕೆಂದು ಪ್ರೆ || ಟ್ರೂಮನರು ತಂದ ಸೂಚನೆಯನ್ನು ಸೆನೇಟು ತಿರಸ್ಕರಿಸಿರುತ್ತದೆ.

ರಷ್ಯಾದ ಕಾರ್ಯ

ಮಂಚೂರಿಯಾದಲ್ಲಿ ರಷ್ಯಾ ಸೈನ್ಯವು ಹೆಚ್ಚು ಕಾಲ ನಿಲ್ಲುವ ಏರ್ಪಾಡು ನಡೆಯುತ್ತಿರುವುದಾಗಿ ಗೊತ್ತಾಗಿದೆ.

— ಮೈಸೂರು ಪೌರಸಭೆಯ ಉಪಾಧ್ಯಕ್ಷ ಸಿನ್ನೆ ಮತ್ತು ಮೊನ್ನೆ ಇ ಫಾರ್ಜ್ ಅಧ್ಯಕ್ಷರಾಗಿದ್ದರು. —

ಬಾಕಾಯ್ದೆ ಕೇಂದ್ರ

ತಿಮ್ಮಜನಹಳ್ಳಿ ಜಿಲ್ಲೆಯಲ್ಲಿ ಹೊಸೂರು ಹಳ್ಳಿಯ ಹತ್ತಿರದ ಒಂದು ಜಮೀನು ಮತ್ತು ಒಂದು ಲಕ್ಷ ರೂ. ಸರ್ಕಾರಕ್ಕಾಗಿ ಔಷಧಾಲಯ ತೆರೆಯಲು ಮಹಾತ್ಮಾಗಾಂಧೀಜಿಯವರಿಗೆ ಒಪ್ಪಿಸಲಾಗಿ .

ಅದೇ ತಿಮ್ಮಜನಹಳ್ಳಿಯ ಹತ್ತಿರ ಬೇಸಿಕ್ ಶಾಲೆ ತೆರೆಯುವ ಬಗ್ಗೆ ಇನ್ನೊಂದು ಜಮೀನು ಮತ್ತು ಐದು ಸಾವಿರ ರೂ. ಬ್ಯೂರೋಬ್ಬರಿಂದ ಗಾಂಧಿಜೀಯವರಿಗೆ ಕೊಡಲಾಗಿದೆ.

ಅಮರಣ ಉಪವಾಸ

ಕರ್ನಾಟಕ ಪ್ರಾಂತೀಯ ಬಂಗಾಲದ ಕ್ರಾಂತಿಕಾರಿ ಗುಂಪಿಗೆ ಸೇರಿದ ಅಲಹಾಬಾದ್ ಜೈಲ್ವಿಲೂಟ ಬಟ್ಟಿಯಲ್ಲಿ 19 ಡಿಸೆಂಬರವಲ್ಲಿ 10 ವರ್ಷ ಶಿಕ್ಷೆಗೊಳಗಾದವರೂ ಆದ ಶ್ರೀ ವಿ ಜಿ. ಅಂಗಡಿಯವರು ಸಾಯುವ ಪರ್ಯಂತದ ಬದಲಿ ತಿರುಗದಲ್ಲಿ ಇನ್ನಿತರ ಕ್ರಾಂತಿಕಾರ ಖೈದಿಗಳೊಡನೆ ಅವರೂ ಉಪವಾಸ ಕೈಗೊಂಡಿರುವರೆಂದೂ ಇದೇ ತಾ 2 ಕ್ಕೆ ಉಪವಾಸ ವಶ್ರಂಭಿಸಿ 14 ದಿನಗಳಾಗಿತ್ತೆಂದೂ ತಿಳಿದುಬಂದಿದೆ

ವಾಹಾಂದ್ರ ಹೋಮಕ್ಕೆ ನಮ್ಮ ಪತ್ರಿಕೆಯ ಕೆಲವು ಗಾರರು ತೆರಳುವ ಪ್ರಯುಕ್ತ ನಾಳೆ ಪತ್ರಿಕೆಯಿಲ್ಲ (ವ್ಯಾಸ)

At Ranjit

TAQDEER

ತಾ||15—2—46ರಿಂದ

ತಕದೀರ್

ನಾರ್ಗೀಸ್, ಮೋತಿಲಾಲ್, ಚಾರ್ಲಿ

ಹಸಿ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂಮೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

2 nd Week
At Opera —
ಪರಂಜ್ಯೋತಿ

ವಿ. ಎ. ಚೆಲ್ಲಪ್ಪ ಸಿ. ಪಿ. ರತಿಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧುರಂ ಪಾತ್ರದಾರಿಗಳು

ಮುಂದಿನ ವಿನೋದ
ಸುರೇಂದ್ರ, ಮೋಹತಾಜ್
ಪಾತ್ರವಹಿಸಿರುವ
ವಿಶ್ವಾಸ್

ನುಮ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ. ಸದಾ ಇದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಶ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಆಳ್. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ಕ್ಕೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

ಮಾನ್ಯರೆಲ್ಲರ ಪ್ರಾತಿನಿಧ್ಯದ ನಿಕಲ್ ಪ್ರತಾ ಶರೆವ ಕಛೇರಿಭಾಗ್ಯದೇವಾಯ್ಯ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing
L. N. Press
Sriram st MYSORE